# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | |
|---|---|---|
| ಹೆಸರು | : ಮಂಜುನಾಥ ಮೇಟಿ | ಪ್ರಾಸಾ-06 |
| ತಂದೆಯ ಹೆಸರು | : ಸುಭಾಸ | ಚಾಸಾ-15 |
| ವರ್ಷ | : 27 ವರ್ಷ | |
| ಉದ್ಯೋಗ | : ಚಾಲಕ | |
| ವಿಳಾಸ | : ಜಡ್ರಾಮಕುಂಟಿ | |

ದಿಃ 27.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ಚಾಸಾ-16 ಯಮನಪ್ಪ ತೇಜಿ ನನಗೆ ಗೊತ್ತು. ಮೃತ ಯಮನಪ್ಪ ಚಾಸಾ-16 ರವರ ಮಾವ. ಚಾಸಾ-16 ರವರ ಬಳಿ ಒಂದು ಬಲೆರೋ ವಾಹನ ಇರುತ್ತದೆ. ಸಾಮಾನ್ಯವಾಗಿ ಎಲ್ಲಾದಾರೂ ಹೊರಗೆ ಹೋಗಬೇಕಾದರೆ ನನ್ನನ್ನು ಸದರಿ ಬುಲೋರೋ ವಾಹನವನ್ನು ಚಾಲನೆ ಮಾಡಲು ಕರೆಯುತ್ತಾರೆ.

2. ಈಗ ಅಂದಾಜು 3 ವರೆ ವರ್ಷಗಳ ಹಿಂದೆ ಸಂಜೆ ಸುಮಾರು 7-00 ಗಂಟೆಗೆ ಚಾಸಾ-16 ರವರು ನನಗೆ ಕರೆ ಮಾಡಿ ಅವರ ಮಾವನಿಗೆ ಆರೋಪಿತರು ಹೊಡೆದಿರುತ್ತಾರೆ ಅವರನ್ನು ಕರೆದುಕೊಂಡು ಬರಲು ಬೆಣ್ಣೂರ ಗ್ರಾಮಕ್ಕೆ ಹೋಗಬೇಕೆಂದು ಹೇಳಿ ನನ್ನನ್ನು ಕರೆದು ಅವರ ವಾಹನವನ್ನು ಚಲಾಯಿಸಲು ತಿಳಿಸಿರುತ್ತಾರೆ. ನಂತರ ನಾನು, ಚಾಸಾ-16 ಹಾಗೂ ಚಾಸಾ-1 ರವರು ಸುಮಾರು 8-00 ಗಂಟೆಗೆ ಬಲೆರೋ ವಾಹನದಲ್ಲಿ ಬೆಣ್ಣೂರು ಗ್ರಾಮದಲ್ಲಿರುವ ಆರೋಪಿತರ ಮನೆಯ ಹತ್ತಿರ ಹೋಗಿರುತ್ತೇವೆ. ಸ್ಥಳಕ್ಕೆ ಹೋಗಿ ನೋಡಿದಾಗ ಯಮನಪ್ಪನ ತಲೆಗೆ ತೀವ್ರವಾದ ಗಾಯಗಳಾಗಿದ್ದು ಮಾತನಡುವ ಸ್ಥಿತಿಯಲ್ಲಿರಲಿಲ್ಲ ಮತ್ತು ಮೂರ್ಚೆ ಹೋಗಿದ್ದನು. ಚಾಸಾ-14 /ಮುತ್ತಪ್ಪ ರವರೂ ಸಹ ಸ್ಥಳದಲ್ಲಿದ್ದರು. ನಂತರ ಯಮನಪ್ಪನನ್ನು ನಮ್ಮ ಬಲೆರೋ ವಾಹನದಲ್ಲಿ ಜಡ್ರಾಮಕುಂಟಿಯಲ್ಲಿರುವ ಅವರ ಮನೆಗೆ ಕರೆದುಕೊಂಡು ಬಂದಿರುತ್ತೇವೆ. ಚಾಸಾ-14/ ಮುತ್ತಪ್ಪ ಯಮನಪ್ಪನ ದ್ವಿಚಕ್ರ ವಾಹನವನ್ನು ಓಡಿಸಿಕೊಂಡು ನಮ್ಮ ಹಿಂದೆ ಬಂದಿರುತ್ತಾರೆ.

ಇದಾದ ಎರಡು ದಿನಗಳ ನಂತರ ಚಾಸಾ-16 ರವರು ಮತ್ತೊಮ್ಮೆ ನನಗೆ ಕರೆ ಮಾಡಿ ಯಮನಪ್ಪನನ್ನು ಆಸ್ಪತ್ರೆಗೆ ಕರೆದುಕೊಂಡ ಹೋಗಿ ದಾಖಲಿಸಬೇಕೆಂದು ಹೇಳಿದ್ದರಿಂದ ಬಲೆರೋ ವಾಹನದಲ್ಲಿ ಬೆಳಿಗ್ಗೆ ಸುಮಾರು 4-00 ಗಂಟೆಗೆ ಯಮನಪ್ಪನನ್ನು ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬೆಳಿಗ್ಗೆ 6-00 ಗಂಟೆಗೆ ದಾಖಲಿಸಿರುತ್ತೇವೆ. ಇದಾದ ಎರಡು ದಿನಗಳ ನಂತರ

ಯಮನಪ್ಪ ಮೃತಪಟ್ಟಿರುತ್ತಾನೆ. ಈ ವಿಚಾರವಾಗಿ ಪೋಲೀಸರ ನನ್ನನ್ನು ವಿಚಾರ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃಶ್ರೀ. ವಿ ಎಸ್ ಎಮ್ ವಕೀಲರಿಂದ** ಆರೋಪಿ ಪರ

ನನ್ನ ಬಳಿ 4 ಚಕ್ರದ ವಾಹನವನ್ನು ಚಾಲನೆ ಮಾಡಲು ಚಾಲನೆ ಪರವಾನಿಗೆ ಇರುತ್ತದೆ. ಜಡ್ರಾಮಕುಂಟಿಯಿಂದ ಬೆಣ್ಣೂರಿಗೆ ಸುಮಾರು 4 ಕಿಲೋ ಮೀಟರ ಅಂತರ ಇರಬಹುದು. ನಾವು ಬೆಣ್ಣೂರ ಗ್ರಾಮಕ್ಕೆ ಹೋದಾಗ ಸಮಯ ರಾತ್ರಿ ಸುಮಾರು 8-00 ಗಂಟೆಯಾಗಿರಬಹುದು. ಆಗ ಯಮನಪ್ಪನಿಗೆ ಪ್ರಜ್ಞೆ ಇರಲಿಲ್ಲ. ಯಮನಪ್ಪ ಬಿದ್ದಿದ್ದ ಸ್ಥಳದ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆಂದರೆ ಸರಿ. ಆ ಸಮಯದದಲ್ಲಿ ಬೆಣ್ಣೂರ ಗ್ರಾಮದ ಸಾರ್ವಜನಿಕರು ಸ್ಥಳದಲ್ಲಿರಲಿಲ್ಲ. ಬೆಣ್ಣೂರ ಗ್ರಾಮದಲ್ಲಿ ಯಮನಪ್ಪನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಯಮನಪ್ಪನನ್ನು ಅದೇ ದಿನ ಬಾಗಲಕೋಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಕೊಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

2. ಚಾಸಾ-16 ರವರು ನನಗೆ ಕರೆ ಮಾಡಿ ಅವರ ಮಾವನಾದ ಯಮನಪ್ಪನಿಗೆ ಹಲ್ಲೆ ಮಾಡಿದ ವಿಚಾರವನ್ನು ನನಗೆ ತಿಳಿಸಿರುವುದಿಲ್ಲ ಮತ್ತು ಚಾಸಾ-16 ರವರಿಗೆ ಸೇರಿದ ಬಲೆರೋ ವಾಹನವನ್ನು ನಾನು, ಚಾಸಾ-16 ಮತ್ತು ಚಾಸಾ-1 ರವರ ಜೊತೆ ಬೆಣ್ಣೂರ ಗ್ರಾಮಕ್ಕೆ ಹೋಗಿ ಗಾಯಾಳು ಯಮನಪ್ಪನನ್ನು ಕರೆದುಕೊಂಡು ಜಡ್ರಾಮಕುಂಟಿ ಗ್ರಾಮಕ್ಕೆ ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿಅಲ್ಲ.

3. ಇದಾದ ಎರಡು ದಿನಗಳ ನಂತರ ಚಾಸಾ-16 ರವರು ನನಗೆ ಮತ್ತೆ ಕರೆ ಮಾಡಿರುವುದಿಲ್ಲ ಮತ್ತು ಬಲೆರೋ ವಾಹನದಲ್ಲಿ ಯಮನಪ್ಪನನ್ನು ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುವುದಿಲ್ಲ ಎಂದರೆ ಸರಿಅಲ್ಲ. ಚಾಸಾ-1 ಮತ್ತು ಚಾಸಾ-16 ರವರ ಮಾತು ಕೇಳಿ ಈಗ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಅಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | | |
|---|---|---|---|
| ಹೆಸರು | : ಮುತ್ತಪ್ಪ ತೇಜಿ | | ಫ್ರಾಸಾ-05 |
| ತಂದೆಯ ಹೆಸರು | : ವಿಠ್ಠಪ್ಪ | | ಚಾಸಾ-14 |
| ವರ್ಷ | : 38 ವರ್ಷ | | |
| ಉದ್ಯೋಗ | : ಒಕ್ಕಲುತನ | | |
| ವಿಳಾಸ | : ಜಡ್ರಾಮಕುಂಟಿ | | |

ದಿಃ 27.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಯಮನಪ್ಪ ಉದ್ದಣ್ಣವರ ನನಗೆ ಗೊತ್ತು. ಚಾಸಾ-1/ಸಂಗವ್ವ ಮೃತನ ಹೆಂಡತಿ. ಆರೋಪಿತರಾದ ಬಸಪ್ಪ ಉದ್ದಣ್ಣನವರ ಮತ್ತು ಹನಮಂತ ಉದ್ದಣ್ಣನವರ ವರಿಗೂ ಮತ್ತು ಮೃತ ಯಮನಪ್ಪನಿಗೂ ಏನು ಸಂಬಂದ ಅಂತಾ ನನಗೆ ಗೊತ್ತಿಲ್ಲ.

2. ಈಗ ಅಂದಾಜು 3 ವರೆ ವರ್ಷಗಳ ಹಿಂದೆ ನಾನು ನಮ್ಮ ಊರಾದ ಜಡ್ರಾಮಕುಂಟಿಯಲ್ಲಿ ನಮ್ಮ ಮನೆಯ ಮುಂದೆ ಇರುವ ಕಟ್ಟೆಯಲ್ಲಿ ಕುಳಿತುಕೊಂಡಿದ್ದಾಗ ಮೃತ ಯಮನಪ್ಪ ನನ್ನನ್ನು ತಮ್ಮ ಜೊತೆಯಲ್ಲಿ ಬೆಣ್ಣೂರ ಗ್ರಾಮಕ್ಕೆ ಹೋಗಿ ಬರೋಣ ಎಂದು ದ್ವಿಚಕ್ರ ವಾಹನದಲ್ಲಿ ಸಂಜೆ ಸುಮಾರು 4-00 ಗಂಟೆಗೆ ನಮ್ಮ ಊರನ್ನು ಬಿಟ್ಟು ಬೆಣ್ಣೂರ ಗ್ರಾಮದಲ್ಲಿ ಇರುವ ಮೃತ ಯಮನಪ್ಪನ ಅಣ್ಣನ ಮನೆಯ ಹತ್ತಿರ ಬೇಟಿ ನೀಡಿದ್ದು, ಯಮನಪ್ಪ ನ್ಯಾಯಾಯದ ಮುಂದಿರುವ ಆರೋಪಿತರ ಜೊತೆ ಹೊಲ ಮನೆ ವಿಚಾರವಾಗಿ ಮಾತನಾಡುತ್ತಿದ್ದು ಅವರವಲ್ಲಿ ಜಗಳ ಪ್ರಾರಂಭವಾಗಿ ಒಬ್ಬರಿಗೊಬ್ಬರು ಹೊಡೆದಾಡಿಕೊಳ್ಳುತ್ತಿದ್ದರು. ನ್ಯಾಯಾಲಯದ ಮುಂದಿರುವ ಆರೋಪಿ/ಬಸಪ್ಪ ಕಲ್ಲಿನೀಂದ ಯಮನಪ್ಪನ ತಲೆಗೆ ಹೊಡೆದನು. ಇನ್ನೊಬ್ಬ ಆರೋಪಿ/ಹನಮಂತ ಪಿಕಾಸಿ ಕಾವಿನಿಂದ ಯಮನಪ್ಪನ ತಲೆಗೆ ಹೊಡೆದನು. ನಾನು ಆ ಸಮಯದಲ್ಲಿ ಎರಡನೇ ಆರೋಪಿಯ ಕೈಯ್ಯಲ್ಲಿದ ಪಿಕಾಸಿಯ ಕಾವನ್ನು ಕಿತ್ತುಕೊಂಡು ಅಲ್ಲೇ ಬಿಸಾಡಿರುತ್ತೇನೆ. ಯಮನಪ್ಪನಿಗೆ ಬಿದ್ದ ಹೇಟಿನಿಂದ ಯಮನಪ್ಪ ಅಲ್ಲಿಯೇ ನೆಲಕ್ಕೆ ಬಿದ್ದು ಮೂರ್ಚೆ ಹೋಗಿರುತ್ತಾನೆ. ನಂತರ ನಾನು ಯಮನಪ್ಪನ ಅಳಿಯ/ಚಾಸಾ-16/ಯಮನಪ್ಪರವರಿಗೆ ಪೋನ ಮಾಡಿ ಆರೋಪಿತರು ಯಮನಪ್ಪನಿಗೆ ಹಲ್ಲೆ ಮಾಡಿರುತ್ತಾರೆಂದು ತಿಳಿಸಿರುತ್ತೇನೆ. ವಿಷಯ ತಿಳಿದು ಮೃತ ಯಮನಪ್ಪನ ಹೆಂಡತಿ/ಚಾಸಾ-1 ಚಾಸಾ-16/ಅಳಿಯ, ಚಾಸಾ-

15 ರವರು ಬುಲ್ಯೊರೋ ವಾಹನದಲ್ಲಿ ಸ್ಥಳಕ್ಕೆ ಬಂದಿರುತ್ತಾರೆ. ನಂತರ ಯಮನಪ್ಪನನ್ನು ಬುಲ್ಯೊರೋ ವಾಹನದಲ್ಲಿ ಯಮನಪ್ಪನ ಜಡ್ರಾಮಕುಂಟಿಯಲ್ಲಿರುವ ಚಾಸಾ-1 ರವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಅವರನ್ನು ಹಿಂಬಾಲಿಸಿಕೊಂಡು ಯಮನಪ್ಪನ ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ಬಂದಿರುತ್ತೇನೆ. ನಂತರ ಮರುದಿನ ಮುಡಪೂಜಿ ಗ್ರಾಮದಿಂದ ಒಬ್ಬರು ಬಂದು ಯಮನಪ್ಪನನ್ನು ಪರೀಕ್ಷಿಸಿ ಆತನನ್ನು ಆಸ್ಪತ್ರೆಗೆ ದಾಖಲಿಸಲು ತಿಳಿಸಿರುತ್ತಾರೆ. ಅದರಂತೆ ಯಮನಪ್ಪನನ್ನು ಚಿಕಿತ್ಸೆಗಾಗಿ ಬಾಗಲಕೋಟೆ ಕಟ್ಟಿ ಆಸ್ಪತ್ರೆಯಲ್ಲಿ ದಾಖಲಿಸಲಾಯಿತು.

3. ಯಮನಪ್ಪ ಮೃತಪಟ್ಟ ಎರಡು ದಿನಗಳ ನಂತರ ಪೋಲೀಸರು ನನ್ನನ್ನು ಘಟನಾ ಜಾಗಕ್ಕೆ ಬರಮಾಡಿಕೊಂಡು ನಾನು ಪೋಲೀಸರಿಗೆ ತೋರಿಸಿದ ಸ್ಥಳದಲ್ಲಿ ಪೋಲೀಸರು ಸ್ಥಳದಲ್ಲಿ ಬಿದ್ದಿದ್ದ ಒಂದು ಕಲ್ಲು, ಪಿಕಾಸಿ ಮತ್ತು ರಕ್ತ ಕಲೆ ಇದ್ದ ಠಾರನ್ನು ಅಗೆದು ಪಂಚನಾಮೆಯಡಿಯಲ್ಲಿ ಜಪ್ತಪಡಿಸಿಕೊಂಡಿರುತ್ತಾರೆ. ಅದೇ ಸಮಯಕ್ಕೆ 5 ಭಾವಚಿತ್ರಗಳನ್ನು ತೆಗೆಯಲಾಯಿತು. ಸದರಿ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-5 ಅಂತಾ ಗುರುತಿಸಲಾಯಿತು. ಸಾಕ್ಷಿ ಸ್ಥಳ ಪಂಚನಾವೆಯಡಿಯಲ್ಲಿ ಜಪ್ತಪಡಿಸಿಕೊಂಡ ಕಲ್ಲು, ಪಿಕಾಸಿ ಮತ್ತು ರಕ್ತ ಕಲೆ ಇದ್ದ ಠಾರ ಚೂರನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ-3 ರಿಂದ 5 ಅಂತಾ ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಒಂದನೇ ಆರೋಪಿ/ಬಸಪ್ಪ ಮತ್ತು 2 ನೇ ಆರೋಪಿ/ಹನಮಂತನನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ಯಮನಪ್ಪನನ್ನು ಕಟ್ಟಿ ಆಸ್ಪತ್ರೆಗೆ ದಾಖಲಿಸಿದ ಎರಡು ದಿದನಗಳ ನಂತರ ಮೃತಪಟ್ಟಿರುತ್ತಾನೆ ಎಂದರೆ ಸರಿ. ಚಾಸಾ-1 ರವರು ಯಮನಪ್ಪನನ್ನು ಕಟ್ಟಿ ಆಸ್ಪತ್ರೆಗೆ ದಾಖಲಿಸಿದ ದಿನವೇ ದೂರನ್ನು ಬಾಗಲಕೋಟೆ ಗ್ರಾಮೀಣ ಪೊ.ಠಾಣೆಯಲ್ಲಿ ದಾಖಲಿಸಿರುತ್ತಾರೆಂದರೆ ಸರಿ. ದೂರನ್ನು ದಾಖಲಿಸಿದ ಮರುದಿನ ಬೆಳಿಗ್ಗೆ 9-00 ಗಂಟೆಗೆ ಬೆಣ್ಣೂರ ಗ್ರಾಮದಲ್ಲಿ ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಲಾಯಿತು ಎಂದರೆ ಸರಿ. ಇದಾದ ಮರುದಿನ ಯಮನಪ್ಪ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆಂದರೆ ಸರಿ.

**ಪಾಟೀ ಸವಾಲುಃಶ್ರೀ. ವಿ ಎಸ್ ಎಮ್ ವಕೀಲರಿಂದ** ಆರೋಪಿ ಪರ

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಕಾರಣದಿಂದ ಅವರ ಕೋರಿಕೆಯನ್ನು ನಿರಾಕರಿಸಿ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | |
|---|---|---|
| ಹೆಸರು | : ಹನಮಪ್ಪ ದಳವಾಯಿ | ಫ್ರಾಸಾ-04 |
| ತಂದೆಯ ಹೆಸರು | : ಚಂದ್ರಪ್ಪ | ಚಾಸಾ-13 |
| ವರ್ಷ | : 35 ವರ್ಷ | |
| ಉದ್ಯೋಗ | : ಗ್ರಾಮ ಸಹಾಯಕ | |
| ವಿಳಾಸ | : ಜಡ್ರಾಮಕುಂಟಿ | |

ದಿಃ 27.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಯಮನಪ್ಪ ಉದ್ದಣ್ಣವರ ನನಗೆ ಗೊತ್ತು. ಚಾಸಾ-1/ಸಂಗವ್ವ ಮೃತನ ಹೆಂಡತಿ. ಈಗ ಅಂದಾಜು 3 ವರೆ ವರ್ಷಗಳ ಹಿಂದೆ ಆರೋಪಿತರಾದ/ಬಸಪ್ಪ ಉದ್ದಣ್ಣನವರ ಮತ್ತು ಹನಮಂತ ಉದ್ದಣ್ಣನವರ ಯಮನಪ್ಪನಿಗೆ ಡೊಣ್ಣೆಯಿಂದ ಹಲ್ಲೆ ಮಾಡಿದ್ದು ಈ ವಿಚಾರವಾಗಿ ದೂರು ನೀಡಬೇಕು ಎಂದು ಚಾಸಾ-1/ಸಂಗವ್ವರವರು ನನಗೆ ಹೇಳಿದ್ದರಿಂದ ಅವರ ಜೊತೆಯಲ್ಲಿ ನಾನು ಬಾಗಲಕೋಟೆ ಗ್ರಾಮೀಣ ಪೊ.ಠಾಣೆಗೆ ಬೇಟಿ ನೀಡಿರುತ್ತೇನೆ. ನಂತರ ಚಾಸಾ-1 ರವರು ಹೇಳಿದಂತೆ ದೂರನ್ನು ಬರೆದು ಪೋಲೀಸರಿಗೆ ನೀಡಿರುತ್ತೇವೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಅಂತಾ ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ-1 ಎ ಅಂತಾ ಗುರುತಿಸಲಾಯಿತು. ಈ ವಿಚಾರವಾಗಿ ಪೋಲೀಸರು ವಿಚಾರ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

2. ಯಮನಪ್ಪ ಹಲ್ಲೆಯ ವಿಚಾರವಾಗಿ ಬಾಗಲಕೋಟೆ ಕಟ್ಟಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದು, ಎರಡು ದಿನಗಳ ನಂತರ ಚಿಕಿತ್ಸೆ ಫಲಕಾಗಿಯಾಗದೆ ಇದ್ದ ಕಾರಣದಿಂದ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾನೆ. ಈ ವಿಚಾರವಾಗಿ ನನ್ನ ಮುಂದುವರೆದ ಹೇಳಿಕೆಯನ್ನು ಪೋಲೀಸರು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ. ವಿ ಎಸ್ ಎಮ್ ವಕೀಲರಿಂದ** ಆರೋಪಿ ಪರ

ಚಾಸಾ-1 ಸಂಗವ್ವ ನನ್ನ ಸಂಬಂಧಿಕಳು ಎಂದರೆ ಸರಿಅಲ್ಲ. ಈ ದಿನ ನ್ಯಾಯಾಲಯಕ್ಕೆ ಚಾಸಾ-/ಸಂಗವ್ವ ರವರು ಬಂದಿರುತ್ತಾರೆಂದರೆ ಸರಿ. ಚಾಸಾ-1 ರವರು ಹೇಳಿಕೊಟ್ಟಂತೆ ಈ ದಿನ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಅಲ್ಲ. ಈ ಘಟನೆಯನ್ನು ನಾನು ಕಣ್ಣಾರೆ

ನೋಡಿರುವುದಿಲ್ಲ ಎಂದರೆ ಸರಿ. ದೂರನ್ನು ಘಟನೆಯಾಗಿದೆ ಎಂದು ಹೇಳುವ 2 ದಿನಗಳ ನಂತರ ದಾಖಲಿಸಲಾಗಿದೆ ಎಂದರೆ ಸರಿ. ದೂರನ್ನು ದಾಖಲಿಸುವ ಮುನ್ನ ನನಗೆ ಘಟನೆ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ದೂರನ್ನು ದಾಖಲಿಸಿದ ನಂತರ ಮತ್ತೊಮ್ಮೆ ನಾನು ಠಾಣೆಗೆ ಹೋಗಿರುವುದಿಲ್ಲ. ಪೋಲೀಸರು ಹೇಳಿದಂತೆ ನಿಪಿ-1 ದೂರನ್ನು ಬರೆದಿರುತ್ತೇನೆ ಎಂದರೆ ಸಾಕ್ಷಿ ಚಾಸಾ-1 ರವರು ಹೇಳಿದಂತೆ ಬರೆದಿರುತ್ತೇನೆ. ಚಾಸಾ-1 ರವರು ನನಗೆ ಆರೋಪಿತರಾದ ಬಸಪ್ಪ ಮತ್ತು ಹನಮಂತ ರವರು ಆಕೆಯ ಗಂಡನಿಗೆ ಹಲ್ಲೆ ಮಾಡಿರುತ್ತಾರೆಂದು ನನಗೆ ಯಾವುದೇ ವಿಷಯವನ್ನು ತಿಳಿಸಿರುವುದಿಲ್ಲ ಎಂದರೆ ಸರಿಅಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | | |
|---|---|---|---|
| ಹೆಸರು | : | ವೀರಪ್ಪ ಬೈರಮಟ್ಟಿ | ಫ್ರಾಸಾ-03 |
| ತಂದೆಯ ಹೆಸರು | : | ಸಂಗಪ್ಪ | ಚಾಸಾ-11 |
| ವರ್ಷ | : | 33 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಚೌಡಾಪೂರ | |

ದಿಃ 27.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು, ಅದರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಮೊಬೈಲ ಜಪ್ತ ಪಂಚನಾಮೆಯಾಗಿದ್ದು, ಸಾಕ್ಷಿ ಸಹಿ ಗುರುತಿಸುವ ಸಲುವಾಗಿ ಪಂಚನಾಮೆಯನ್ನು ನಿಶಾನೆ ಪಿ-9 ಎಂದು, ಸಾಕ್ಷಿ ಸಹಿಯನ್ನು ನಿಶಾನೆ ಪಿ-(9)ಎ ಎಂದು ಗುರುತಿಸಲಾಯಿತು.

ಈಗ ಅಂದಾಜು 3 ವರ್ಷಗಳ ಹಿಂದೆ ನಾನು ವ್ಯಯಕ್ತಿಕ ಕೆಲಸ ಮೇಲೆ ಬಾಗಲಕೋಟೆ ಗ್ರಾಮೀಣ ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನನ್ನು ಕರೆಸಿ ನಿಪಿ-9 ಪಂಚನಾವೆಯ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-9 ಪಂಚನಾವೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮೊಬೈಲ ಪೋನಗಳನ್ನು ಜಪ್ತಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು ಠಾಣೆಯಲ್ಲಿ ತೆಗೆಯಲಾಗಿದೆ. ಅವುಗಳನ್ನು ಯಾವ ಕಾರಣಕ್ಕಾಗಿ ತೆಗೆಯಲಾಗಿದೆ ಅಂತಾ ನನಗೆ ಗೊತ್ತಿಲ್ಲ. ಸದರಿ ಭಾವಚಿತ್ರಗಳನ್ನು ಒಟ್ಟಾಗಿ ನಿಪಿ-10 ಅಂತಾ ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ದಿಃ 16-12-2021 ರಂದು ಮದ್ಯಾಹ್ನ 2-00 ಗಂಟೆಗೆ ನನ್ನನ್ನು ಹಾಗೂ ಚಾಸಾ-12 ರವರನ್ನು ಬಾಗಲಕೋಟೆ ಗ್ರಾಮೀಣ ವೃತ್ತ ಕಚೇರಿಗೆ ನನ್ನನ್ನು ಕರೆಸಿ ಅಲ್ಲಿ ಮಲ್ಲವ್ವ ಎನ್ನುವವರು ಎರಡು ಮೊಬೈಲ ಪೋನುಗಳನ್ನು ಹಾಜರುಪಡಿಸಿ ಸದರಿ ಮೊಬೈಲಲ್ಲಿ ಒಂದು ಮೊಬೈಲ ಆಕೆಯ ಗಂಡನ ಮೊಬೈಲ ಪೋನ ಮತ್ತೊಂದು ಮೊಬೈಲ ಪೋನ ತನ್ನ ಮಗನದ್ದು ಎಂದು ಹಾಜರುಪಡಿಸಿದ್ದು ಅವುಗಳನ್ನು ನನ್ನ ಮತ್ತು ಚಾಸಾ-12 ರವರ ಸಮಕ್ಷಮ ನಿ-9 ಪಂಚನಾಮೆಯಡಿಯಲ್ಲಿ ಜಪ್ತಪಡಿಸಿಕೊಳ್ಳಲಾಗಿದೆ ಎಂದರೆ ಸರಿಅಲ್ಲ. ಅದೇ ಸಮಯಕ್ಕೆ ನಿಪಿ-10 ರಂತೆ ಭಾವಚಿತ್ರಗಳನ್ನು ತೆಗೆಯಲಾಯಿತು ಎಂದರೆ ಸರಿಅಲ್ಲ. ನನಗೆ ಎಲ್ಲ ವಿಚಾರ ತಿಳಿದು ನಿಪಿ-9 ಪಂಚನಾಮೆಗೆ ಸಹಿ ಮಾಡಿದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಅಲ್ಲ.

**ಪಾಟೀ ಸವಾಲುಃಶ್ರೀ. ವಕೀಲರಿಂದ** ಆರೋಪಿ ಪರ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .